174	ಲಿಂಗಸಗೂರು			1365	170625	6
175	ಮಾನ್ವಿ			1595	199375	12
176	ಸಿಂಧನೂರು			1413	176625	10
		ಒಟ್ಟು	940643	355910	44488750	3663

481(922) : ಶ್ರೀ ಶಿವಾನಂದ ನಾಯಕ್(ಬಟ್ಟಳ್ಳ) ಮಾನ್ಯ ಭಾರಿ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಫಾರಂ–37 ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಘಟಕಗಳಿಗೆ ಫಾರಂ–ಡಿ ಯನ್ನು ಹಿಂತೆಗೆದುಕೊಂಡಿರುವುದರಿಂದ ಸಣ್ಣ ಕೈಗಾರಿಕಾ ಘಟಕಗಳು ತೊಂದರೆಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಮುಂದಿನ ಯೋಜನೆಗಳೇನು?

ಇ) ಸಣ್ಣ ಕೈಗಾರಿಕೆಗಳ ಹಿತವನ್ನು ಸರ್ಕಾರ ಕಾಪಾಡುವುದೇ?

ಶ್ರೀ ಪಿ.ಜಿ.ಆರ್ ಸಿಂಧ್ಯ (ಭಾರಿ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸಚಿವರು) :

ಅ) ಫಾರಂ–37 ಸೌಲಭ್ಯವನ್ನು ಹಿಂತೆಗೆದುಕೂಂಡಿರುವುದಿಲ್ಲ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಘಟ್ಟಗಳಿಗೆ ಫಾರಂ–ಡಿ ಸೌಲಭ್ಯ ಎಂದೂ ಇರಲಿಲ್ಲ. ಆದುದರಿಂದ ಸಣ್ಣ ಕೈಗಾರಿಕಾ ಘಟಕಗಳು ತೊಂದರೆಗೆ ಸಿಲುಕುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

483(751) : ಶ್ರೀ ಸೋಮಲಿಂಗಪ್ಪ ಎಂ.ಎಸ್(ಸಿರುಗುಪ್ಪ) ಮಾನ್ಯ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ತುಂಗಭದ್ರಾ ಅಚ್ಚು ಕಟ್ಟಿನ ಪ್ರದೇಶದಲ್ಲಿ ಕಬ್ಬು ಬೆಳೆಯುತಿರುತ್ತಿದ್ದರೂ ತಿಳಿಸದೇ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದಲ್ಲಿ ಅದಕ್ಕೆ ಕಾರಣವೇನು?

ಆ) ಕಾರ್ಖಾನೆಯು ಮುಚ್ಚಿರುವ ಪ್ರಯುಕ್ತ: ಕಾಮೀಕರಿಗೆ ಪರಿಹಾರ ಕಲ್ಪಿಸಿಕೊಡಲಾಗುವುದೇ; ಹಾಗಿದ್ದಲ್ಲಿ ಸರ್ಕಾರವು ಯಾವ ರೀತಿಯ ಪರಿಹಾರವನ್ನು ಒದಗಿಸುವುದು;

ಇ) ಸದರಿ ಕಾರ್ಮಿಕರಿಗೆ 2003ನೇ ಸಾಲಿನ ಫೆಬ್ರವರಿಯಿಂದ ಡಿಸೆಂಬರ್‌ವರೆಗೆ ರೂ. 1.66 ಕೋಟಿ ಪಾವತಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಬಾಕಿ ಮೊತ್ತಪಾವತಿಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು

ಉ) ಸರ್ಕಾರವು 1998 ರಿಂದ ವೇತನ ಪರಿಷ್ಕರಣ ಮಾಡಿದ್ದರೂ ಕಾರ್ಮಿಕರಿಗೆ ವೇತನ ನೀಡದಿರುವ ಬಗ್ಗೆ ಕೈಗೊಂಡಿರುವ ಸೂಕ್ತ ಕ್ರಮವೇನು?

ಊ) ಸಕ್ಕರೆ ಕಾರ್ಖಾನೆಯ ಪುನ ಪ್ರಾರಂಭಿಸಲಾಗುವುದೆ?

ಶ್ರೀ ಅಮರೇ ಗೌಡ ಎಲ್. ಪಾಟೀಲ್ ಬಯ್ಯಾಪುರ(ಸಕ್ಕರೆ ಸಚಿವರು) :

ಅ) ಈ ಕಾರ್ಖಾನೆಯು ಖಾಸಗಿ ವಲಯದ ಸಕ್ಕರೆ ಕಾರ್ಖಾನೆಯಾಗಿದ್ದು, ಇದು ತನ್ನ ಆಂತರಿಕ ಸಮಸ್ಯಗಳಿಂದ ಹಾಗೂ ಆರ್ಥಿಕ ಬಿಕ್ಕಟಿನಿಂದಾಗಿ ಕಾರ್ಖಾನೆಯು ದಿನಾಂಕ: 25–2–03ರಿಂದಲೇ ಲೇ–ಆಫ್ ಆಗಿರುತ್ತದೆ. ಈ ಕಾರ್ಖಾನೆಯು ವ್ಯಾಪ್ತಿಯಲ್ಲಿರುವ ಕಬ್ಬನ್ನು ನರೆಯ ಐ.ಎಸ್.ಆರ್ ಸಕ್ಕರೆ ಕಾರ್ಖಾನೆಗೆ ಸಾಗಾಣಿಕೆ ಮಾಡಲು ಕ್ರಮವಹಿಸಲಾಗಿದೆ.

ಆ) ಸದರಿ ಕಾರ್ಖಾನೆಯು ದಿನಾಂಕ : 25–2–03ರಿಂದಲೇ ಲೇ–ಆಪ್ ಘೋಷಿಸಿರುತ್ತದೆ. ಇದರಿಂದ ಅಡಳಿತ ವರ್ಗದವರು ಜನವರಿ 2003 ರಿಂದ ಜೂನ್ 2003 ರವರೆಗೆ ವೇತನ ಹಾಗೂ 2001–03ರ ಅವಧಿಯ ಬೋನಸ್ ಹಾಗೂ ಹಂಗಾಮಿ ಕಾರ್ಮಿಕರಿಗೆ ಪಾವತಿಸಬೇಕಾದ ಹಣ ರೂ. 1,98,98,811.00 ನ್ನು ಪಾವತಿಸಬೇಕೆಂದು ಕಾರ್ಮಿಕ ವರ್ಗದವರು ಬೇಡಿಕೆಯಾಗಿರುತ್ತದೆ.

ಈ ವಿಷಯದಲ್ಲಿ ಉಪಕಾರ್ಮಿಕ ಆಯುಕ್ತರು, ಗುಲ್ಬರ್ಗಾ ಇವರು ದಿನಾಂಕ : 30–10–03 ರ ಪ್ರತ್ರದ ಮೂಲಕ ರೂ.82,52,419.00ನ್ನು ಸದರಿ ಕಾರ್ಖಾನೆ ಯವರಿಂದ ಕಾರ್ಮಿಕರಿಗೆ ಹಣವೆಂದು ನೀಡಬೇಕಾಗಿರುವ ಬಾಕಿ ವೇತನ, ಬೋನಸ್ ಹಣವೆಂದು ಭೂ ಕಂದಾಯ ಬಾಕಿ ರೀತ್ಯ ವಸೂಲಿ ಮಾಡಲು ಆದೇಶ ಮಾಡಿರುತ್ತಾರೆ.

ಇ) ಉಪ ಕಾರ್ಮಿಕ ಆಯುಕ್ತರು, ಗುಲ್ಬರ್ಗಾ ಇವರ ಆದೇಶದ ಪ್ರಕಾರ ರೂ. 82,54,419.00ನ್ನು ಪಾವತಿಸಬೇಕಾಗಿರುತ್ತದೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಉಪ ಕಾರ್ಮಿಕ ಆಯುಕ್ತರು, ಗುಲ್ಬರ್ಗಾ ಇವರು ರೂ. 82,52,419.00 ನ್ನು ಭೂ ಕಂದಾಯ ಬಾಕಿ ರೀತ್ಯಾ ವಸೂಲಿ ಮಾಡಲು ಕಳುಹಿಸಿದ ವಸೂಲಾತಿ ಪ್ರಮಾಣ ಪತ್ರಗಳ ಬಗ್ಗೆ ತಹಶೀಲ್ದಾರರು, ಸಿರಗುಪ್ಪ ಇವರೇ ಭೂ ಕಂದಾಯ ಕಾಯ್ದೆ ಕಲಂ 190 ರನ್ವಯ ವಸೂಲಿ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಕಾರ್ಯಾಲಯದಿಂದ ನಿರ್ದೇಶಿಸಲಾಗಿದ್ದು ತಹಶೀಲ್ದಾರ್‌ರವರ ಆದೇಶದನ್ವಯ ನಮೂನೆ 37ರ ನೋಟೀಸನ್ನು ಸಂಸ್ಥೆಯ ಮ್ಯನೇಜಮೆಂಟ್ ರವರಿಗೆ ಜಾರಿ ಮಾಡಿರುತ್ತಾರೆ. ತದನಂತರ ಕಾರ್ಖಾನೆಯ ಚರ–ಸ್ಥಿರ ಆಸ್ತಿಗಳ ಬಗ್ಗೆ ಕ್ರಮಜರುಗಿಸುವ ಸಮಯದಲ್ಲಿ ಬೋರ್ಡ್ ಫಾರ ಇಂಡಸ್ಟ್ರಿಯಲ್ ಹಾಗೂ ಫೈನಾನ್ಷಿಯಲ್ ರೀ ಕನ್‌ಸ್ಟ್ರಕ್ಷನ್, ನವದೆಹಲಿ(BIFR)ಇವರಿಂದ ಸದರಿ ಪ್ರಕರಣದಲ್ಲಿ ವಸೂಲಿ ಪ್ರಕ್ರಿಯೆಗೆ ತಡೆಯಾಜ್ಞೆ ಬಂದಿರುತ್ತದೆ.

ಉ) ಸದರಿ ಪ್ರಕರಣದಲ್ಲಿ ಮೇಲೆ ವಿವರಿಸಿದಂತೆ ವೇತನ ಪಾವತಿಸುವ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ ಈ ಕಾರ್ಖಾನೆಯ ವಿಚಾರವು ಬಿ.ಐ.ಎಫ್.ಆರ್. ಮುಂದೆ ಇತ್ಯರ್ಥಕ್ಕೆ ಇರುವುದರಿಂದ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಆಸ್ತಿ ಹರಾಜು ಪ್ರಕ್ರಿಯೆ ಸ್ಥಗಿತಗೊಂಡಿರುತ್ತದೆ.

ಊ) ಸದ್ಯಕ್ಕೆ ಈ ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡುವ ಕುರಿತು ಯಾವುದೇ ಪ್ರಕ್ರಿಯೆಯೂ ಇರುವುದಿಲ್ಲ.